ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 14, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಸ್ 1871ನೇ ಇಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್‌ಯಾನೆ ಜಮೀನ್ ಅಭಿವೃದ್ಧಿಯ ಆಕ್ಟ್‌ನ್ನು ತಿದ್ದುಪಡೀ ಮಾಡುವ ಬಗ್ಗೆ ಹುಟ್ಟಿದ ಮಸುವಿದಾ ಆಕ್ಟ್.

———:0:———

ಪೀಠಿಕೆ. 1871ನೇ ಇಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟ್ಯಾನೆ ಜಮೀನ್ ಅಭಿವೃದ್ಧಿಯ ಆಕ್ಟಿನ ಕೆಲವು ನಿಬಂಧನೆಗಳ ಅಮಲ್ ವಿಷಯದಲ್ಲಿ ಸಂದೇಹಗಳು ವುಂಟಾಗಿರುವದರಿಂದ ಅಂತಾ ಸಂದೇಹಗಳನ್ನು ನಿವರ್ತಿ ಮಾಡುವ ಉದ್ದೇಶದೊಡನೆ ಐಜ್ಞ ಆಕ್ಟ್‌ನ್ನು ತಿದ್ದುಪಡಿ ಮಾಡುವದು ಯುಕ್ತವಾಗಿರೋಣದರಿಂದ ನಿರ್ಣಯಿಸಲ್ಪಡುವದೇನಂದರೆ.

ಸ್ಥಳಿಕ ವ್ಯಾಪ್ತಿ. ಈ ಆಕ್ಟ್ ಬ್ರಿಟಿಷ್ ಇಂಡ್ಯದ ಸರ್ವತ್ರ ವ್ಯಾಪಿಸುತ್ತದೆ.

ಕಲ್ಪನೆ. ಯಿದು 1871ನೇ ಇಸವಿಯ ಸದರೀ ಜಮೀನ್ ಅಭಿವೃದ್ಧಿ ಆಕ್ಟಿನೊಂದಿಗೆ ಓದಲ್ಪಟ್ಟು ಅವರ ವೊಂದು ಭಾಗವಾಗಿ ಅಂಗೀಕರಿಸಲ್ಪಡತಕ್ಕದ್ದು.

ಸುರು. ಮತ್ತು ಯಿದು 1871ನೇ ಇಸವಿ ಶಪ್ಟಂಬರ್ 28ನೇ ತಾರೀಖಿನಲ್ಲಿ ಜಾರೀಗೆ ಬಂದಂತೆ ಯೆಣಿಸಲ್ಪಡತಕ್ಕದ್ದು—ಯಾತಕ್ಕಂದರೆ ಸದರೀ ತಾರೀಖಿನಲ್ಲಿ ಐಜ್ಞ ಆಕ್ಟ್ ಜಾರೀಗೆ ತರಲ್ಪಟ್ಟಿತು.

1871ನೇ ಇಸವಿಯ 26ನೇ ನಂ ಆಕ್ಟಿನ 15ನೇ ಸೆಕ್ಷನ್ ತಿದ್ದುಪಾಡು. ಐಜ್ಞ ಆಕ್ಟಿನ 15ನೇ ಸೆಕ್ಷನ್ ರದ್ದು ಮಾಡಲ್ಪಟ್ಟಿರುತ್ತೆ, ಮತ್ತು ಅದಕ್ಕೆ ಬದಲಾಗಿ ಯಿದರ ಕೆಳಗೆ ಬರುವ ಸೆಕ್ಷನ್ ಯೇರ್ಪಡಿಸಲ್ಪಡ ತಕ್ಕದ್ದು.

"15. ಈ ಆಕ್ಟ್ ಪ್ರಕಾರ ಅಡ್ವಾನಸ್ ಕೊಡಲ್ಪಟ್ಟ ದರೋಬಸ್ತು ವೊಬಲಗ್‌ಗಳೂ ಅವು ಬಾಕೀ ಆದಾಗ ಈ ಕೆಳಗೆ ನಮೂದಿಸಲ್ಪಡುವ ವಿಶಿಷ್ಟ ವಿಧಗಳಿಂದಲಾಗಲಿ, ಆವೈಕಿ ಯಾವ ವಿಧದಿಂದಲಾಗಲಿ, ವಸೂಲ್ಮಾಡಲ್ಪಡ ತಕ್ಕದ್ದು.

(a.) ಹಣ ತೆಗದುಕ್ಕೊಂಡವನಿಂದ, ಸದರೀ ವೊಬಲಗ್ ಜಮೀನ್ ಕಂದಾಯದ ಬಾಕೀಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

(b.) ಜಾಮೀರ್ದಾರ ಯಾವನಾದರೂ ಯಿದ್ದರೆ ಆತನಿಂದ, ಸದರೀ ಮೊಬಲಗ್ ಜಮೀರ್ ಕಂದಾಯದ ಬಾಕಿಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

(c.) ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಿಂದ, ಸದರೀ ಮೊಬಲಗ್ ಅಂತಾ ಜಮೀನಿಗಾಗಿ ಸಲ್ಲಬೇಕಾದ ಕಂದಾಯದ ಬಾಕೀ ಮೊಬಲಗಾಗಿದ್ದರೆ ಹ್ಯಾಂಗೋ ಹಾಂಗೆ,

(d.) ಯಿತರ ಖಾತರು ಯೆನಾದರೂ ಯಿದ್ದರೆ, ಅಂತಾ ಖಾತರು ದಸ್ತಾವೇಜಿನ ಷರತ್ತುಗಳ ಪ್ರಕಾರ ಅಂತಾ ಖಾತರು ಆಡಗಿಸಿಕೊಂಡಿರುವ ಸ್ವತ್ತಿನಿಂದ,—
ಪರಂತು,

(e.) ಹಣ ತೆಗದುಕೊಂಡವನು ಜಮೀರ್ದಾರನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಸಾಗುವಳೀದಾರ ವುಂಟಾಗಿರತಕ್ಕ ಸ್ವಂತ ಯಾ ಸಾಗುವಳೀ ಹಕ್ಕು ಆಡ್ವಾನ್ಸ್ ತೆಗದುಕೊಂಡ ಮೊಬಲಗಿಗೆ ಸಾಗುವಳೀದಾರನು ಅಂತಾ ಹಕ್ಕನ್ನು ಯಿತರ ಖಾತರಾಗಿ ಮಾಡಿಕೊಟ್ಟಿದ್ದರೇನೇ ಹೊರತು ಅಂತಾ ಆಡ್ವಾನ್ಸ್ ಮೊಬಲಗ್ ಬರಮಾಡಿಕೊಳ್ಳುವದಕ್ಕೊಸ್ಕರ ಹರಾಜು ಆಗಲಿಕ್ಕೆ ಗುರಿಯಾಗಿರ ತಕ್ಕದ್ದಿಲ್ಲಾ.

(f.) ಹಣ ತೆಗದುಕೊಂಡವನು 7ನೇ ಸೆಕ್ಷನ್ನಲ್ಲಿ ನಮೂದಿಸಲ್ಪಟ್ಟ ಸಾಗುವಳೀದಾರ ನಂತಾವನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಜಮೀರ್ದಾರನಿಗೆ ಯಿರತಕ್ಕ ಹಕ್ಕುದಾರಿಯು ಆಡ್ವಾನ್ಸ್ ಕೊಟ್ಟು ಮೊಬಲಗ್ ಬರಮಾಡಿಕೊಳ್ಳುವದಕ್ಕೊಸ್ಕರ ಹರಾಜುಆಗಲಿಕ್ಕೆ ಗುರಿಯಾಗಿರಕ್ಕದ್ದಿಲ್ಲಾ.

(g.) ಮತ್ತು ಆಡ್ವಾನ್ಸ್ ಕೊಟ್ಟಿದ್ದ ಮೊಬಲಗು, ಹಣ ತೆಗದುಕೊಂಡವನ ಯಾ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನ ದೇಣೇ ಸಮಾಧಾನಕ್ಕಾಗಿ ಜಮೀರ್ದಾರನಿಂದಲಾಗಲಿ ಆತನ ಸ್ವತ್ತಿನ ಮೇಲಾಗಲಿ, ವಸೂಲ್ ಮಾಡಿಕೊಳ್ಳಲ್ಪಟ್ಟರೆ, ಹಣ ತೆಗದುಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀರ್ ಮೇಲೂ ಆಡ್ವಾನ್ಸ್ ಕೊಟ್ಟ ಮೊಬಲಗು ಬರಬೇಕಾದಾಗ ಸರಕಾರದವರಿಗೆ ಯಾವ ದಾವೆಗಳು ವ ಪರಿಹಾರಗಳು ವುಂಟಾಗಿದ್ದವೋ ಅದೇ ದಾವೆಗಳೂ ಪರಿಹಾರಗಳೂ ಹಣ ತೆಗದುಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀರ್ ಮೇಲೂ ಸದರೀ ಜಾಮೀರ್ದಾರಗೆ ಉಂಟಾಗಿರ ತಕ್ಕದ್ದು.

ಉದ್ದೇಶ ಕಾರಣಗಳ ವಿವರಣೆ.

(1871ನೇ ಇಸವಿಯ 26ನೇ) ಲ್ಯಾಂಡ್ ಇಂಪ್ರೂವ್ ಮೆಂಟ್‌ಯಾನೆ ಜಮೀರ್ ಅಭಿವೃದ್ಧಿಯ ಆಕ್ಟಿನ 14ನೇ ಸೆಕ್ಷನ ವಿಧಿಸುವದೇನಂದರೆ.—ಸದರೀ ಆಕ್ಟು ಅನುಸರಿಸಿ ಆಡ್ವಾನ್ಸ್ ಕೊಡುವಂತಾ ಕಲೆಕ್ಟರಿಂದ ಕೊಡಲ್ಪಡುವ ಪ್ರತಿ ಸರಟಿಫಿಕೇಟಿನಲ್ಲೂ, ಆಡ್ವಾನ್ಸ್ ಮೊಬಲಗ್ ಅಭಿವೃದ್ಧಿ ಮಾಡತಕ್ಕ ಜಮೀರ್ ಯಿರುವ ಜಾಗಾ, ವಿಸ್ತೀರ್ಣ, ಚತುರ್ಗಡಿಗಳು ಮತ್ತು ಅಭಿವೃದ್ಧಿ ಆಗತಕ್ಕ ಜಮೀರ್ ಅಲ್ಲದೆ ಯಿತರವಾದ ಜಾಮೀರ್ (ಯಾವದಾದರೂ ಯಿದ್ದಲ್ಲಿ) ಅಂತಾದ್ದರ ಸ್ವರೂಪ, ಮತ್ತು ಮೊಬಲಗ್ ಯಿಂತಾವುಗಳನ್ನು ವಿವರಿಸತಕ್ಕದ್ದು, ಎಂಬದು. ಬಳಿಕ 15ನೇ ಸೆಕ್ಷನ ವಿಧಿಸುವದೇನಂದರೆ,—ಹಾಗೆ ವಿವರಿಸಲ್ಪಟ್ಟ ಮೊಬಲಗ್ ಯಾರಿಗೆ ಆಡ್ವಾನ್ಸ್ ಕೊಡಲ್ಪಟ್ಟಿತೋ ಅಂತಾ ಮನುಷ್ಯನಿಂದಲಾಗಲಿ "ಮೊಬಲಗ್ ಪಾವತೀ ಮಾಡುವಬಗ್ಗೆ ಜಾಮೀನಾದ ಯಾವ ಮನುಷ್ಯನಿಂದಾಗಲಿ, ಆಡ್ವಾನ್ಸ್ ಕೊಡಲ್ಪಟ್ಟ ಮನುಷ್ಯನಿಂದ ಯಾ ಅವನ ಜಾಮೀರ್ದಾರನಿಂದ ಸಲ್ಲತಕ್ಕ ಜಮೀರ್ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದೆಂಬದು."

15ನೇ ಸೆಕ್ಷನಿನ ಉಳಿದ ಭಾಗವು ಈ ಕೆಳಗೆ ಬರುವ ಪ್ರಕಾರ ಇರುತ್ತೆ.

"ಅಂತಾ ಯಾವ ಮೊಬಲಗಾಗಲಿ ಆ ಮೇರೆ ವಸೂಲಾಗದೆ ಇದ್ದರೆ ಅದು ಸದರೀ ಸರ್ಟಿಫಿಕೇಟ್‌ನಲ್ಲಿ ವಿವರಿಸಲ್ಪಟ್ಟ ಜಮ್ಮಾಬಗ್ಯೆ ಸಲ್ಲತಕ್ಕ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದು,

"ಪರಂತು, ಅಡ್ವಾನ್ಸ್ ಕೊಡಲ್ಪಟ್ಟ ಮನುಷ್ಯ ಜಮ್ಮಾದಾರನಾಗಿ ಅಥವಾ, ಜಮ್ಮಾದಾರನ ಅನುಮತಿಯಿಲ್ಲದೆ ಜಮ್ಮಾ ಸಂಬಂಧವನ್ನು ಪರಭಾರೇಮಾಡಲಿಕ್ಕೆ ಬಾಧ್ಯತೆಯುಳ್ಳ ಸಾಗುವಳೀದಾರನಾಗಿದ್ದರೆಹೊರತು ಅನ್ಯಥಾ ಅಂತಾ ಜಮ್ಮಾದಾರನಲ್ಲದ ಯಾ ಸಾಗುವಳೀದಾರನಲ್ಲದ, ಯಿತರ ಯಾವ ಮನುಷ್ಯನ ಸದರೀ ಜಮ್ಮಾ ಸಂಬಂಧವೂ ಈಸೆಕ್ಷನ್ ಅನುಸರಿಸಿ ಮಾರಲ್ಪಡತಕ್ಕದ್ದಲ್ಲವು.

ಈ ಕ್ಲಾಜ್ ಮೇಲೆ ಎರಡಂಶಗಳು ವಿಚಾರಣೀಯಗಳಾಗಿರುತ್ತವೆ, ಮೊದಲನೇದು—ಗವರ್ಮೆಂಟಿನವರು ಕೊಡುವ ಅಡ್ವಾನ್ಸ್ ಮೊಬಲಗ್, ಯಿತರ ದರೋಬಸ್ತು ಖರ್ಚುಗಳಿಗಿಂತ ಅಭಿವೃದ್ಧಿ ಮಾಡತಕ್ಕ ಜಮೀನಿನ ಬಾಬತು ಮೊದಲನೇ ಖರ್ಚಾಗಿರುತದೆಯೇ? ಈ ಖರ್ಚುಗಳು ಕಾಲದ ವಿಷಯದಲ್ಲಿ ಪೂರ್ವ ಭಾವಿಯಾದ್ದೆಅಲ್ಲವೆ? ಎರಡನೇದು "ಸದರೀಸರ್ಟಿಫಿಕೇಟಿನಲ್ಲಿ ವಿವರಿಸೋಣಾದ ಜಮ್ಮೀಯೆಂಬ ಮಾತು ಜಾಮ್ಮೀ ತರೀಕ್ ಕೊಡಬಹುದಾದ ಯಾವ ಜಮೀನನ್ನಾಗಲಿ ಅಡಗಿಸಿಕ್ಕೊಂಡಿರುತ್ತದೆಯೇ ಹ್ಯಾಗೆ? ಎಂಬವು.

ಈ ಸಂದೇಹಗಳನ್ನು ನಿವೃತ್ತಿ ಮಾಡುವದೇ ಪ್ರಕೃತ ಮಸವಿದಾ ಆಕ್ಟಿನ ಉದ್ದೇಶವಾಗಿರುತ್ತೆ. ಸದರೀ ಆಕ್ಟು ಯಾವ ಆಧಾರಗಳ ಮೇಲೆ ಕಲ್ಪಿಸಲ್ಪಟ್ಟಿತೋ ಅಂತಾ ಆಧಾರಗಳೆಂದು ನಂಬಲ್ಪಟ್ಟಿರುವಂತಾವುಗಳ ಪ್ರಕಾರ, ಮತ್ತು ಯಿದುವರಿಗೆ ದರೋಬಸ್ತು ಮುಬಾದಲೇಗಳೂ ನಿಸ್ಸಂಶಯವಾದ ಯಾವಅಭಿಪ್ರಾಯದಿಂದ ಯಿದುವರಿಗೆ ಕೊಡಲ್ಪಟ್ಟಿತೋ, ತೆಗದುಕ್ಕೊಳ್ಳಲ್ಪಟ್ಟಿತೋ ವ ವಸೂಲ್ ಮಾಡಿಕ್ಕೊಳ್ಳಲ್ಪಟ್ಟಿತೋ ಅಂತಾ ಅಭಿಪ್ರಾಯದ ಪ್ರಕಾರವೂ, ಸದರೀ ಬಿಲ್ ಅಂತಾ ಸಂಶಯ ನಿವೃತ್ತಿಯನ್ನು ಮಾಡುತ್ತಿದೆ ಅದು ಹ್ಯಾಗೆಂದರೆ—ಗವರ್ಮೆಂಟಿನಿಂದ ಸಲ್ಲುವ ಅಡ್ವಾನ್ಸುಗಳು, ಅಂತಾ ಜಮ್ಮೀನಲ್ಲಿ ಆಗತಕ್ಕ ದರೋಬಸ್ತು ಯಿತರ ಖರ್ಚುಗಳು ಮತ್ತು ಸಂಬಂಧಗಳು, ಯಿವುಗಳಿಗಿಂತ ಅಭಿವೃದ್ಧಿ ಮಾಡತಕ್ಕ ಜಮ್ಮೀ ಮೇಲೆ ತಗಲುವ ಖರ್ಚಾಗಿರತಕ್ಕದ್ದು, ಮತ್ತು ಜಾಮ್ಮೀ ಬಗ್ಯೆ ಯಿತರ ಜಮ್ಮೀ ಕೊಡಲ್ಪಟ್ಟ ಪಕ್ಷಕ್ಕೆ ಗವರ್ಮೆಂಟಿನಿಂದ ಸಂದ ಅಡ್ವಾನ್ಸ್, ಸ್ವಂತ ಮನುಷ್ಯನಿಂದ ಸಾಧಾರಣ ಅಡ್ವಾನ್ಸಾಗಿದ್ದರೆ ಹ್ಯಾಗೋ ಹಾಗೆಯೇ ಯಿತರಖರ್ಚುಗಳ ತರೀಕ್ ಯೆಣಿಸಲ್ಪಡತಕ್ಕದ್ದು.

ಸದರೀ ಕ್ಲಾಜಿನ ಖಂಡಿತವಾದ ಅರ್ಥ ವಿಚಾರದಮೇಲೆ ಮುಖ್ಯಸ್ಥನ ಮೇಲಣ ಪರಿಹಾರಗಳೆಲ್ಲ ನಿವರ್ತಗಳಾಗುವದಕ್ಕೆ ಮುಂದಾಗಿ ಜಾಮ್ಮೀದಾರನು ದಾವಾಮಾಡಲ್ಪಡತಕ್ಕದ್ದೆಂದು ಇನ್ನೊಂದು ಬಗೆಯಾಗಿಚರ್ಚಿಸಲ್ಪಡಬಹುದು. ಅದು ನ್ಯಾಯವಲ್ಲವು, ಮತ್ತು ಹಾಗೆ ಉದ್ದೇಶಿಸಲ್ಪಡಲೂ ಯಿಲ್ಲವು. ಆದ್ದರಿಂದ ಈ ಯಂಶದಲ್ಲಿಯಿರತಕ್ಕ ಸಂಶಯಗಳನ್ನು ನಿವರ್ತಿಸಮಾಡುವದಕ್ಕೂ, ಮುಖ್ಯಸ್ಥನು ಮತ್ತು ಜಾಮ್ಮೀದಾರನು ಯಿವರುಗಳ ಮೇಲೆ ಯಿರತಕ್ಕ ಪರಿಹಾರವು ಮಾಮೂಲ್ ಸ್ಥಿತಿಯಲ್ಲಿರುತ್ತೆಂದು ಸ್ಪಷ್ಟಪಡಿಸುವದಕ್ಕೂ ಈ ಸಂದರ್ಭವನ್ನು ಆವಲಂಬಿಸಲಾಯಿತು.

ಸಿಂಲಾ, ತಾರೀಖು 28ನೇ ಆಗಸ್ಟು 1876.

A. HOBHOUSE.

Mysore Government Press, Bangalore—1876.